S.C. No.11/2022
P.W.-18
C.W.-24

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## S.C. No.11/2022

ಇಂದು ದಿನಾಂಕ**- 23.06.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ದಾವಲಸಾಬ |
| ತಂದೆ ಹೆಸರು- | ಹಸೇನಸಾಬ |
| ವಯಸ್ಸು- | 38 ವರ್ಷ |
| ಉದ್ಯೋಗ- | ಮೇಷನ್ ಕೆಲಸ |
| ವಾಸಸ್ಥಳ- | ನಜೀರ್ ಸಾಬ ಕಾಲೋನಿ, ಕಾರಟಗಿ |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತಿಲ್ಲ. ನನಗೆ ಅವರ ಪರಿಚಯವಿಲ್ಲ. ನನಗೆ ಚಾಸಾ-23 ರವರ ಪರಿಚಯವಿಲ್ಲ. ನಾನು ಮೃತ ಬಾಲಕ ಮಲ್ಲಿಕಾರ್ಜುನನನ್ನು ಈ ಹಿಂದೆ ನೋಡಿರುವುದಿಲ್ಲ. ಆತ ಯಾರು ಎಂದು ನನಗೆ ಗೊತ್ತಿಲ್ಲ. ಆತನಿಗೂ 1 ಮತ್ತು 3 ನೇ ಆರೋಪಿತರಿಗೂ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ಆತನಿಗೆ ಏನಾಯಿತು ಹಾಗೂ ಆತ ಜೀವಂತವಾಗಿದ್ದಾನೆಯೇ ಅಥವಾ ಮೃತಪಟ್ಟಿರುತ್ತಾನೆಯೇ ಎಂದು ನನಗೆ ಗೊತ್ತಿಲ್ಲ. ಆತನ ಬಗ್ಗೆ ನನಗೆ ಮೊಬೈಲಿನಲ್ಲಿ ಯಾವುದೇ ಮಾಹಿತಿ ಕಂಡು ಬಂದಿರುವುದಿಲ್ಲ. ನಾನು ಆತನನ್ನು ಯಾರ ಜೊತೆಗಾಗಲಿ ಹೋಗುತ್ತಿದ್ದುದನ್ನು ನೋಡಿಲ್ಲ. ಆತನ ಮರಣ ಹೇಗೆ ಹಾಗೂ ಯಾವ ಕಾರಣ

ಸಂಭವಿಸಿತು ಎಂದು ನನಗೆ ಗೊತ್ತಿಲ್ಲ. ನಿ.ಪಿ.-2 ರಿಂದ 6 ರ ಪೋಟೋಗಳನ್ನು ನಾನು ಈ ಹಿಂದೆ ನೋಡಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವ ಕಾರಣ ಪ್ರಾಜ್ಞ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿರುವ ಕಾರಣ ಕೋರಿಕೆಯ ಮೇರೆಗೆ ಅನುಮತಿ ನೀಡಲಾಯಿತು.)

**ಪಾಟೀಸವಾಲು - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

2. ನ್ಯಾಯಾಲಯದ ಮುಂದಿರುವ ಆರೋಪಿತರು ನಾನು ವಾಸವಿರುವ ಕಾರಟಗಿಯ ನಜೀರ್ ಸಾಬ ಕಾಲೋನಿಯ ನಿವಾಸಿಗಳು ಎಂದರೆ ಸರಿಯಲ್ಲ. ಅವರು ನಾನು ವಾಸವಿರುವ ಪ್ರದೇಶದಲ್ಲಿಯೇ ವಾಸವಿದ್ದರೂ ಸಹ ನನಗೆ ಅವರ ಪರಿಚಯವಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯು 1 ನೇ ಆರೋಪಿಯ ಸೊಸೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಆರೋಪಿತರ ಕುಟುಂಬದ ಬಗ್ಗೆ ಪರಿಯವಿದೆ ಎಂದರೆ ಸರಿಯಲ್ಲ. ಮೃತ ಬಾಲಕ ಮಲ್ಲಿಕಾರ್ಜುನನು 3 ನೇ ಆರೋಪಿಯ ಮಗ ಎಂದರೆ ನನಗೆ ಗೊತ್ತಿಲ್ಲ. ನನಗೆ ಆತನ ಬಗ್ಗೆಯೂ ಸಹ ಪರಿಚಯವಿದೆ ಎಂದರೆ ಸರಿಯಲ್ಲ. ನಮ್ಮ ಓಣಿಯಲ್ಲಿ ತುಂಗಾ-ಭದ್ರ ನದಿಯ ಕಾಲುವೆ ಹರಿದು ಹೋಗುತ್ತದೆ ಎಂದರೆ ಸರಿ. ಅದರಲ್ಲಿ ನಮ್ಮ ಏರಿಯಾದ ಮಕ್ಕಳು ಆಟವಾಡುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 23.10.2020 ರಂದು 3 ನೇ

ಆರೋಪಿಯ ಮಗ ಮಲ್ಲಿಕಾರ್ಜುನನನ್ನು ಸಂಜೆ 04.00 ಗಂಟೆ ಸುಮಾರಿಗೆ ನಮ್ಮ ಓಣಿಯಿಂದ ಅಪಹರಣ ಮಾಡಿಕೊಂಡು ಹೋಗಿ ತೆಂಗಿನ ಹಗ್ಗದಿಂದ ಕೈಕಾಲು ಕಟ್ಟಿ ಕೊಲೆ ಮಾಡಿ ಸದರಿ ಕಾಲುವೆಯ ನೀರಿಗೆ ಹಾಕಿದ್ದು ಆತನ ಮೃತ ದೇಹವು ಮಸ್ಕಿ ಹತ್ತಿರ ಸಿಕ್ಕಿರುವ ಬಗ್ಗೆ ನಾನು ನನ್ನ ಮೊಬೈಲಿನಲ್ಲಿ ವಾಟ್ಸಪ್ ಮತ್ತು ಫೇಸ್‌ಬುಕ್ಕುಗಳಲ್ಲಿ ಹರಿದಾಡುತ್ತಿದ್ದ ನಿ.ಪಿ.-2 ರಿಂದ 6 ಫೋಟೋಗಳನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಮನೆ ಸಹ ನಮ್ಮ ಮನೆಯ ಕಾಲುವೆಯ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿಯು ನಮ್ಮ ಓಣಿಯಲ್ಲಿ ಸಣ್ಣಪುಟ್ಟ ಮಕ್ಕಳಿಗೆ ದೇವರ ಹೆಸರಿನಲ್ಲಿ ಲೋಬಾನ ಕೊಡುವುದು, ದಾರ ಕಟ್ಟುವುದು ಮಾಡುತ್ತಿದ್ದು 3 ನೇ ಆರೋಪಿಯು ಆತನೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿಯು ತನ್ನ ಮಾವ ಸೋಮಲಿಂಗಪ್ಪನೊಂದಿಗೆ ಸಲುಗೆಯಿಂದ ಇರುತ್ತಿದ್ದು ಅವರು ಮೋಟಾರು ಸೈಕಲಿನಲ್ಲಿ ಆಗಾಗ ತಿರುಗುತ್ತಿದ್ದುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅವರಿಬ್ಬರ ಮಧ್ಯೆ ಅನೈತಿಕ ಸಂಬಂಧ ನನಗೆ ತಿಳಿಯಿತು ಎಂದರೆ ಸರಿಯಲ್ಲ. ದಿನಾಂಕ 23.10.2020 ರಂದು ಸಂಜೆ 04.30 ರಿಂದ 05.00 ಗಂಟೆ ಸುಮಾರಿಗೆ ನಾನು ಹಾಗೂ ಚಾಸಾ-23 ರವರು ಕೆಲಸ ಮುಗಿಸಿಕೊಂಡು ನವಲಿ ಕ್ರಾಸ್ ಹತ್ತಿರ ಮನೆಯ ಕಡೆಗೆ ಬರುತ್ತಿದ್ದಾಗ ಮೃತ ಬಾಲಕ ಮಲ್ಲಿಕಾರ್ಜುನನನ್ನು 1 ಮತ್ತು 2 ನೇ ಆರೋಪಿತರು ಒಂದು ಸಿಲ್ವರ್ ಕಲರ್ ಮೋಟಾರು ಸೈಕಲಿನಲ್ಲಿ ಕರೆದುಕೊಂಡು ಹೋಗುತ್ತಿದ್ದುದನ್ನು ನಾವು ನೋಡಿರುತ್ತೇವೆ ಎಂದರೆ ಸರಿಯಲ್ಲ. ಆಗ 2 ನೇ ಆರೋಪಿಯನ್ನು ನಾನು

ಮಾತನಾಡಿಸಿದಾಗ 2 ನೇ ಆರೋಪಿಯು ತಾನು ಅರ್ಜೆಂಟಾಗಿ ದರ್ಗಾಕ್ಕೆ ಹೋಗಿ ಬರುತ್ತೇವೆ ಎಂದು ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ಮೃತ ಬಾಲಕ ಮಲ್ಲಿಕಾರ್ಜುನನನ್ನು ಜೀವಂತವಾಗಿ ನಾನು ನೋಡಿಲ್ಲ, ಅದೇ ಕೊನೆಯ ಬಾರಿಗೆ ನಾವು ಜೀವಂತವಾಗಿ ನೋಡಿರುವುದು ಎಂದರೆ ಸರಿಯಲ್ಲ. ಆ ದಿನ ಮಧ್ಯಾಹ್ನ 03.00 ಗಂಟೆ ಸುಮಾರಿಗೆ ಮೃತ ಬಾಲಕ ಮಲ್ಲಿಕಾರ್ಜುನ, ಚಾಸಾ- 16 ಮತ್ತು 17 ರವರು ಕಣ್ಣು ಮುಚ್ಚಾಲೆ ಆಟವಾಡುತ್ತಿದ್ದಾಗ ಅವರ ಮನೆಗೆ ಅಡಗಿಕೊಳ್ಳಲು ಓಡಿ ಹೋದಾಗ ಆತ 1 ಮತ್ತು 3 ನೇ ಆರೋಪಿತರು ಸಂಭೋಗ ಮಾಡುತ್ತಿರುವುದನ್ನು ಮತ್ತೇ ಓಡಿ ಬಂದಿದ್ದರಿಂದ ಅವರುಗಳು ತಮ್ಮ ಮಾನ ಮರ್ಯಾದೆಯನ್ನು ಕಳೆಯುತ್ತಾರೆ, ಆತನನ್ನು ಹೇಗಾದರೂ ಮಾಡಿ ಮುಗಿಸಬೇಕೆಂದು 2 ನೇ ಆರೋಪಿಯೊಂದಿಗೆ ಶಾಮೀಲಾಗಿ ಸಂಜೆ 04.00 ರಿಂದ 06.00 ಗಂಟೆಯ ಮಧ್ಯೆ ಆತನನ್ನು ದರ್ಗಾಕ್ಕೆ ಅಪಹರಣ ಮಾಡಿಕೊಂಡು ಮೈಲಾಪುರ ಸಮೀಪ ತುಂಗಾ-ಭದ್ರ ಎಡದಂತೆ ಕಾಲುವೆಯ ಹತ್ತಿರ ಹೋಗಿ ಆತನನ್ನು ಕೊಲೆ ಮಾಡಿ ಸಾಕ್ಷಿ ನಾಶ ಮಾಡುವ ಉದ್ದೇಶದಿಂದ ಆತನ ಕೈ ಮತ್ತು ಕಾಲುಗಳನ್ನು ಹಗ್ಗದಿಂದ ಕಟ್ಟಿ ಎತ್ತಿ ಹಾಕಿರುತ್ತಾರೆ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನನಗೆ ಈಗ ಓದಿ ಹೇಳಿದಂತೆ "ನನಗೆ ---------------------- ಗೊತ್ತಾಗಿರುತ್ತದೆ" ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.-34 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರು ನಾನು ವಾಸವಿರುವ ಓಣಿಯ ನಿವಾಸಿಗಳು

ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು - ಆರೋಪಿತರ ಪರ ವಕೀಲರಿಂದ</u> -**

ಆರೋಪಿತರ ಪರ ವಕೀಲರು ಪಾಟೀಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**<u>ಮರು ವಿಚಾರಣೆ - ಇಲ್ಲ</u>.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).